ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯ ಮಂತ್ರಿಯವರು):– ಮಾನ್ಯ ಅಧ್ಯಕ್ಷರೆ, ಈ ವಿಧಿಸಿಯಮ 334ರ ಕೆಳಗಡೆ ಬಂದಿರುವಂಥ ವಿಷಯವನ್ನು ಸರ್ಕಾರ ಗಮನಿಸುತ್ತದೆ.

ಅಧ್ಯಕ್ಷರು:– ಮಾನ್ಯ ಬಣಕಾರ್‌ರವರು ಪ್ರಸ್ತಾಪ ಮಾಡಿದ ವಿಷಯಕ್ಕೆ ಈ ಕಡೆ ಸಂಬಂಧಪಟ್ಟ ಸಚಿವರು ಇಲ್ಲ. ಯಾರಾದರೂ ಸರ್ಕಾರದ ಪರವಾಗಿ ಒಬ್ಬರು ಅದನ್ನು ಗಮನಕ್ಕೆ ತೆಗೆದುಕೊಳ್ಳಿ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು):– ಮಾನ್ಯ ಅಧ್ಯಕ್ಷರೇ, ಸರ್ಕಾರದ ಪರವಾಗಿ ಅದನ್ನು ಗಮನಿಸುತ್ತೇವೆ.

ಶ್ರೀ ಯು.ಬಿ. ಬಣಕಾರ್:– ಮಾನ್ಯ ಅಧ್ಯಕ್ಷರೇ, ತೀವ್ರವಾಗಿ ಅದಕ್ಕೆ ಹಣ ಪೂರೈಕೆಯಾಗುವಂತೆ ಅದೇ ಆದೇಶವನ್ನು ಕೊಡಬೇಕು.

ಗಮನ ಸೆಳೆಯುವ ಸೂಚನೆಗಳು

ವಿಷಯ:– ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ಪರಿಸ್ಥಿತಿ.

ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ):– ಮಾನ್ಯ ಸಭಾಧ್ಯಕ್ಷರೇ, ಬೆಂಗಳೂರು ನಗರದ ಜನತೆ ಎದುರಿಸುತ್ತಿರುವ ಕುಡಿಯುವ ನೀರಿನ ತೀವ್ರ ಅಭಾವ ಪರಿಸ್ಥಿತಿ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು):– ಮಾನ್ಯ ಸಭಾಧ್ಯಕ್ಷರೇ,

ಶ್ರೀ ವಾಟಾಳ್ ನಾಗರಾಜ್:– ಈ ಸದನದಲ್ಲಿ ನಡೆಯುವುದು ಮಂತ್ರಿಗಳಾದವರು ಉತ್ತರವನ್ನು ಕನ್ನಡದಲ್ಲಿ ಕೊಡತಕ್ಕಂಥದ್ದು. ತಾವು ಚೆನ್ನಾಗಿ ಕನ್ನಡದಲ್ಲಿ ಮಾತನಾಡುತ್ತೀರಿ. ಏತಕ್ಕೆ ಹೀಗೆ ಮಾಡುತ್ತಿದ್ದೀರಿ ? ದಾರಿ ತಪ್ಪುತ್ತಿದ್ದೀರಿ.

ಅಧ್ಯಕ್ಷರು:– ಸ್ವಲ್ಪ ಕಮಾರುಲ್ ಇಸ್ಲಾಂರವರ ಜೊತೆಗೆ ಅವರಿಗೂ ರಿಯಾಯಿತಿ ಕೊಡಿ.

ಶ್ರೀ ವಾಟಾಳ್ ನಾಗರಾಜ್:– ಇವರಿಗೆ ಪಕ್ಕಾ ಕನ್ನಡ ಬರುತ್ತದೆ. ನಾನು ನೋಡಿದ್ದೇನೆ. ಬಹಳ ಸಾರಿ ನನ್ನ ಜೊತೆಯಲ್ಲಿ ಮಾತನಾಡಿದ್ದಾರೆ. ಓಡಾಡಿದ್ದಾರೆ. ಅವರಿಗೆ ಗೊತ್ತಿದೆ.

ಅಧ್ಯಕ್ಷರು:-- ಇವತ್ತಿಗೆ ಬಿಟ್ಟುಬಿಡೋಣ.

ಶ್ರೀ ವಾಟಾಳ್ ನಾಗರಾಜ್:– ಬಹಳ ನೋವಿನಿಂದ.

ಅಧ್ಯಕ್ಷರು:– ಇವತ್ತಿಗೆ ಬಿಟ್ಟುಬಿಡೋಣ.

ಶ್ರೀ ಆರ್. ರೋಷನ್ ಬೇಗ್:– ಪ್ರಸ್ತುತದಲ್ಲಿ ಬೆಂಗಳೂರು ನಗರವು ಕಾವೇರಿ, ಅರ್ಕಾವತಿ ಮತ್ತು ಹೆಸರಘಟ್ಟದಲ್ಲಿ ಸ್ಥಾಪಿಸಿರುವ ಮೂರು ಮೂಲಸ್ಥಾನಗಳಿಂದ ಈ ಕೆಳಗೆ ಕಾಣಿಸಿರುವಂತೆ ಒಟ್ಟು 124 ಎಂ.ಜಿ.ಡಿ. ನೀರನ್ನು ಪಡೆಯುತ್ತಿದೆ.

1. ಕಾವೇರಿ 98 ಎಂ.ಜಿ.ಡಿ.
2. ಅರ್ಕಾವತಿ (ಸಿ. ಆರ್. ಎಸ್. ರಿಸೆರ್‌ವಾಯರ್) 24 ಎಂ.ಜಿ.ಡಿ.
3. ಹೆಸರಘಟ್ಟ 2 ಎಂ.ಜಿ.ಡಿ.

ಈ ಮೇಲಿನ ಪ್ರಮಾಣವು ಬೆಂಗಳೂರಂತಹ ನಗರಕ್ಕೆ ರಾಷ್ಟ್ರೀಯ ಮಟ್ಟದಲ್ಲಿ ನಿಗದಿಪಡಿಸಿದ ಅಳತೆ

ವರ್ಗದ ಪ್ರತಿಯೊಬ್ಬರಿಗೆ 200 ಎಲ್‌ಪಿಸಿಡಿ ವಿರುದ್ಧ 100 ಎಲ್‌ಪಿಸಿಡಿ ಪ್ರಮಾಣದಷ್ಟಾಗುತ್ತದೆ. ಹಾಲಿ ಸರಬರಾಜು ಆಗುತ್ತಿರುವ ನೀರು ಕೇವಲ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಸಾಕಷ್ಟಾಗಿದೆ.

ಮುಂಬರುವ ಒಂದು ವರ್ಷದ ಅವಧಿಯಲ್ಲಿ ಕಾವೇರಿ 3ನೇ ಘಟ್ಟವನ್ನು ಹಂತಹಂತವಾಗಿ ಮುಗಿಸಿ ಪೂರ್ಣವಾಗಿ ಜಾರಿ ಮಾಡಿದಲ್ಲಿ ನೀರಿನ ಸರಬರಾಜನಲ್ಲಿ 22 ಎಂ.ಜಿ.ಡಿ. ಹೆಚ್ಚುವರಿಯಾಗುತ್ತದೆ.

ಈ ತಿಂಗಳ ಮೊದಲಿನಿಂದಲೂ ಅಂದರೆ ಡಿಸೆಂಬರ್ 1994 ರಿಂದ ಕಾವೇರಿ ಪಂಪಿಂಗ್ ಸ್ಟೇಷನ್‌ಗಳಲ್ಲಿ ದುರ್ಬಲ ವಿದ್ಯುತ್ ಚಾಲನಾ ಶಕ್ತಿ ಸ್ಥಿತಿಯಿಂದಾಗಿ ಕಾವೇರಿ ಮೂಲದಲ್ಲಿನ ಸಂಗ್ರಹಣೆಯಲ್ಲಿ ಕಡಿತವಾಗಿ ನಗರಕ್ಕೆ ಸಾಮಾನ್ಯವಾಗಿ ಸರಬರಾಜಾಗುತ್ತಿದ್ದ ನೀರಿನ ಪ್ರಮಾಣವು ಸಹಾ ಕುಂದಿದೆ. ಕಾವೇರಿ ಮೂಲದಲ್ಲಿನ ದುರ್ಬಲ ಸರಬರಾಜಿನಿಂದಾಗಿ ನಗರದಲ್ಲಿನ ರಿಸೆರ್‌ವಾಯರುಗಳಲ್ಲಿ ನೀರಿನ ಸಂಗ್ರಹಣಾ ಮಟ್ಟದಲ್ಲಿ ಸಹಾ ಕಡಿಮೆಯಾಗಿರುವ ಕಾರಣ ನಗರದ ಹಲವಾರು ಭಾಗಗಳಲ್ಲಿ ಸರಬರಾಜು ಪ್ರಮಾಣವು ಅತೃಪ್ತಿಕರವಾಗಿದೆ. ಇದರಿಂದಾಗಿ ವಾರಕ್ಕೆ ಎರಡು ದಿನಗಳು ಅಂದರೆ ಮಂಗಳವಾರ ಮತ್ತು ಶನಿವಾರಗಳಂದು ನೀರಿನ ಸರಬರಾಜನ್ನು ಪೂರ್ಣವಾಗಿ ನಿಲ್ಲಿಸುವ ಕ್ರಮವನ್ನು ಬೆಂಗಳೂರು ಜಲ ಮಂಡಳಿ ಅನಿವಾರ್ಯವಾಗಿ ಆಶ್ರಯಿಸಬೇಕಾಗಿ ಬಂದಿದೆ. ಈ ರೀತಿ ನೀರಿನ ಸರಬರಾಜನ್ನು ನಿಲ್ಲಿಸುವುದರಿಂದ ಬೆಂಗಳೂರು ಜಲಮಂಡಳಿಯು ರಿಸೆರ್‌ವಾಯರುಗಳಲ್ಲಿ ನೀರಿನ ಮಟ್ಟವನ್ನು ಕಾಪಾಡಿಕೊಳ್ಳುವುದಲ್ಲದೇ ತರುವಾಯದ ದಿನಗಳಲ್ಲಿ ತೃಪ್ತಿಕರವಾಗಿ ಸರಬರಾಜು ಮಾಡಲು ಅನುಕೂಲವಾಗುತ್ತದೆ. ಕಾವೇರಿ ಯೋಜನೆಯಲ್ಲಿ ಸ್ವಲ್ಪಮಟ್ಟಿಗೆ ವಿದ್ಯುತ್ ಚಾಲನಾಶಕ್ತಿಯ ಬದಲಾವಣೆಯೊಂದಿಗೆ ಹೊಂದಿಕೊಳ್ಳಬಹುದಾದ 6.6 ಕೆ.ವಿ. ಶಕ್ತಿಯ ಮೋಟಾರುಗಳನ್ನು ಸ್ಥಾಪಿಸಲಾಗಿದೆ. ಈ ಶಕ್ತಿಯ ವಿದ್ಯುತ್ ಚಾಲನಾ ಸರಬರಾಜು ವಿರುದ್ಧ ಕಳೆದ ಒಂದು ತಿಂಗಳಿಂದ ಸಾಮಾನ್ಯವಾಗಿ ದಿನವಿಡೀ 5.5 ಕೆ.ವಿ. ಚಾಲನಾ ಶಕ್ತಿಯಷ್ಟಾದದ್ದರಿಂದ, ಪಂಪುಗಳ ಸಾಮರ್ಥ್ಯ ಕಡಿಮೆಯಾದ್ದರಿಂದ, ನಗರದ ನೀರು ಸರಬರಾಜಿನಲ್ಲಿ ತೊಂದರೆಯಾಗಿದೆ.

ಈ ಅಭಾವ ಪರಿಸ್ಥಿತಿಯನ್ನು ಗಮನಿಸಿ ಮಾನ್ಯ ಮುಖ್ಯ ಮಂತ್ರಿಗಳು 26–12–94ರಂದು ಕರ್ನಾಟಕ ವಿದ್ಯುತ್‌ಚ್ಛಕ್ತಿ ಮಂಡಳಿ ಮತ್ತು ಬೆಂಗಳೂರು ಜಲ ಮಂಡಳಿ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ ವಸ್ತುಸ್ಥಿತಿಯನ್ನು ಪರಿಶೀಲಿಸಿದರು. ಈ ಚರ್ಚೆಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರು ಆಂಧ್ರಪ್ರದೇಶದಿಂದ ಅವಶ್ಯವಿರುವಷ್ಟು ವಿದ್ಯುತ್ ಸರಬರಾಜು ಆಗುತ್ತಿಲ್ಲವಾದ್ದರಿಂದ ಹಾಗೂ ಗುಣಮಟ್ಟದ ವಿದ್ಯುಚ್ಛಕ್ತಿ ಲಭ್ಯವಿಲ್ಲವಾದ್ದರಿಂದ ವಿದ್ಯುತ್ ಚಾಲನಾ ಶಕ್ತಿಯನ್ನು ಒಂದೇ ರೀತಿಯಾಗಿ ನಿರ್ವಹಿಸುವಲ್ಲಿ ತೊಂದರೆಯಾಗಿದೆ. ಇದನ್ನು ಸರಿದೂಗಿಸಲು ಬೂಸ್ಟರ್ ಟ್ರಾನ್ಸ್‌ಫಾರಂಗಳನ್ನು ಸ್ಥಾಪಿಸುವುದು ಅಥವಾ ದುರ್ಬಲ ವಿದ್ಯುತ್ ಚಾಲನೆಗೆ ಹೊಂದಿಕೊಳ್ಳುವಂತೆ ಮೋಟಾರುಗಳನ್ನು ರೀವೈಂಡ್ ಮಾಡಿಸುವುದು ಇತ್ಯಾದಿ ಕ್ರಮಗಳನ್ನು ಕೈಕೊಳ್ಳುವ ಅವಶ್ಯಕತೆಯನ್ನು ವಿವರಿಸಿದರು. ಈ ಪ್ರಸ್ತಾವನೆಯನ್ನು ಎನ್.ಜಿ.ಇ.ಎಫ್. ಯೊಂದಿಗೆ ಸಮಾಲೋಚಿಸಿ ಪರಿಶೀಲಿಸಲಾಗುವುದು.

ಮಾನ್ಯ ಮುಖ್ಯ ಮಂತ್ರಿಗಳು ಬೆಂಗಳೂರು ನಗರದ ಶಾಸಕರೊಂದಿಗೆ ಇತ್ತೀಚೆಗೆ 26–12–94ರಂದು ಈ ವಿಷಯವನ್ನು ಚರ್ಚಿಸಿದ್ದಾರೆ.

† ಶ್ರೀ ಹೆಚ್.ಎನ್. ನಂಜೇಗೌಡ:– ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಅನೇಕ ನಗರಗಳಲ್ಲಿ ಮಂಗಳೂರು ಇರಲಿ, ಮತ್ತೊಂದು ಇರಲಿ ಅಥವಾ ಹುಬ್ಬಳ್ಳಿ--ಧಾರವಾಡ ಇರಲಿ, ನೀರಿನ ಅಭಾವ ಇದೆ. ತೀವ್ರತೆ ಬಗ್ಗೆ ವ್ಯತ್ಯಾಸ ಇರಬಹುದು. ಬೆಂಗಳೂರು ನಗರದ ಅಭಾವದ ತೀವ್ರತೆ ಬಗ್ಗೆ ನಾವು ಈಗ ಗಮನ ಸೆಳೆಯತಕ್ಕ ಪ್ರಯತ್ನವನ್ನು ಪಟ್ಟಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ತಾವು ಅಧಿಕಾರವನ್ನು ವಹಿಸಿಕೊಂಡ ತಕ್ಷಣ ಬೆಂಗಳೂರು ನಗರದ ಶಾಸಕರನ್ನು ಕರೆಯಿಸಿ ಮಾತನಾಡಿದ್ದಿರಿ.

ಅದು ಸಂತೋಷಪಡತಕ್ಕ ವಿಚಾರ. ಸಮಸ್ಯೆಯ ಬಗ್ಗೆ ಗಮನಹರಿಸತಕ್ಕ ಮನಸ್ಸು ಮಾಡುತ್ತಿದ್ದಾರೆ ಈ ಸಂದರ್ಭದಲ್ಲಿ ಫೈಲ್ ನೋಡುವುದು ಬಿಟ್ಟು ಮಾನ್ಯ ಮುಖ್ಯಮಂತ್ರಿಗಳು ನಮ್ಮ ಕಡೆ ಗಮನಕೊಡಬೇಕು. ನೀವು ಪೂರ್ತಿ ಅಟೆನ್‌ಷನ್ ಕೊಡದೇ ಹೋದರೆ ನಮ್ಮ ಮನಸ್ಸು ಭಾಷಣದ ಕಡೆಗೆ ಹೋಗುವುದಿಲ್ಲ. ಇದು ಹಾಗೆ ಆಗಬಾರದು. ನನಗೆ ಬೆಂಗಳೂರು ಎಂದ ತಕ್ಷಣ ಎರಡು ಹೆಸರುಗಳು ಪ್ರಧಾನವಾಗಿ ನೆನಪಿಗೆ ಬರುತ್ತದೆ. ಮೊದಲನೆಯದು ಬೆಂಗಳೂರನ್ನು ಸ್ಥಾಪನೆ ಮಾಡಿದಂತಹ ಕೆಂಪೇಗೌಡರವರ ಹೆಸರು, ಎರಡನೆಯ ಹೆಸರು ಮಾನ್ಯ ಕೆಂಗಲ್ ಹನುಮಂತಯ್ಯನವರ ಹೆಸರು, ಈ ವಿಧಾನಸೌಧವನ್ನು ಕಟ್ಟಿದಂತಹ ವ್ಯಕ್ತಿ. ಈ ಮಾತನ್ನು ಆಡತಕ್ಕದ್ದರಲ್ಲಿ ನನಗೆ ಸ್ವಲ್ಪ ಸ್ವಾರ್ಥ ಇದೆ. ಈಗ ಬೆಂಗಳೂರು ಅಂದ ತಕ್ಷಣ ಗೌಡರ ನೆನಪು ಬರಲಿ ಎಂದು ಸ್ವಾರ್ಥ. ಅದು ಆಗಬೇಕಾದರೆ ಶಾಸ್ತ್ರೋಕ್ತವಾಗಿ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ನೀರಿನ ಅಭಾವವನ್ನು ಪರಿಹರಿಸಬೇಕು. ಇದರಲ್ಲಿ ಏನು ಆಗಿದೆ ಎಂದರೆ ಈಗ ಯಾವ ಮೂಲದಿಂದ ನೀರು ಬರುತ್ತದೆ ಎನ್ನತಕ್ಕದ್ದನ್ನು ಅವರು ಹೇಳಿದ್ದಾರೆ. ಈ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಬೇಕಾದರೆ ನಾವು ಕೆಲವು ವಿಚಾರಗಳನ್ನು ತಿಳಿದುಕೊಳ್ಳಬೇಕು. ಒಂದು ಕಡೆ ನಾಗಾಲೋಟದಿಂದ ಬೆಳೆಯುತ್ತಾ ಇರತಕ್ಕ ಈ ಬಡಾವಣೆಗಳು ಮತ್ತು ಬಹುಮಹಡಿ ಕಟ್ಟಡಗಳು, ಇನ್ನೊಂದು ಕಡೆ ಅಷ್ಟೇ ನಾಗಾಲೋಟದಿಂದ ಬೆಳೆಸಿರತಕ್ಕ ಸ್ಲಮ್‌ಗಳು, ಬೆಳೆದದ್ದು ಅಲ್ಲ, ಬೆಳೆಸಿರತಕ್ಕ ಸ್ಲಮ್‌ಗಳು ಅಂದರೆ, ಕೊಳೆಗೇರಿಗಳು. ಈ ಕೊಳೆಗೇರಿಗಳು ಅಂದರೆ ಯಾರೂ ಗಮನಿಸಿಲ್ಲ ಎಂದು ಕಾಣುತ್ತದೆ. ಸುಮಾರು 660 ಸ್ಲಮ್‌ಗಳು ಇದ್ದಾವೆ. ಒಂದು ಲಕ್ಷ ಕೊಳೆಗೇರಿಗಳು ಉತ್ತರ ಹಳ್ಳಿ ಕ್ಷೇತ್ರದಲ್ಲಿ ಇದ್ದಾವೆ. ಯಾರ ಕೃಪಾ ಕಟಾಕ್ಷವೋ ಗೊತ್ತಿಲ್ಲ.

ಬೆಂಗಳೂರಿನ ಪ್ರಜಾಸಂಖ್ಯೆ ಸುಮಾರು 45 ಲಕ್ಷ ಅಥವಾ 49 ಲಕ್ಷ ಇದೆಯೆಂದು ಹೇಳುತ್ತಾರೆ. ನನಗೆ ಕರಾರುವಕ್ಕಾಗಿ ಗೊತ್ತಿಲ್ಲ. ಇದರಲ್ಲಿ 10 ಲಕ್ಷ ಜನರು ಕೊಳೇಗೇರಿಗಳಲ್ಲಿ ವಾಸಿಸುತ್ತಿದ್ದಾರೆ. ಈ ಕೊಳೆಗೇರಿಗಳಿಗೆ ಹೇಳಿಕೊಳ್ಳತಕ್ಕಂಥ ಮಟ್ಟದಲ್ಲಿ ತಿಪ್ಪಗೊಂಡನಹಳ್ಳಿಯ ನೀರನ್ನಾಗಲಿ ಇಲ್ಲವೇ ಕಾವೇರಿ ನೀರನ್ನಾಗಲಿ ಇನ್ನೂ ಕೊಡುತ್ತಿಲ್ಲ. ಬಹುತೇಕವಾಗಿ ಮಿನಿ ವಾಟರ್ ಸಪ್ಲೈ ಮತ್ತು ರಿಗ್‌ವೆಲ್‌ಗಳನ್ನು ಹಾಕಿದ್ದಾರೆ. ಅಂದರೆ ಏನರ್ಥ ? 10 ಲಕ್ಷ ಜನರಿಗೆ ಈ ನೀರಿನ ಸೌಲಭ್ಯ ಒದಗಿಲ್ಲ. ಇನ್ನು ಉಳಿದಿದ್ದು 35 ಲಕ್ಷ ಜನರು. ಈ 35 ಲಕ್ಷ ಜನರಲ್ಲಿ ಎಷ್ಟು ಜನರಿಗೆ ಅಂದರೆ ತಾವು ಅಂಕಿ–ಅಂಶ ಕೊಟ್ಟು ಸರಾಸರಿ ಹೇಳಿದ್ದೀರಿ. ಅದೇನೆಂದು ಗೊತ್ತಾಗಿಲ್ಲ. ತಾವು ಹೇಳತಕ್ಕಂಥ ಲೆಕ್ಕದ ಪ್ರಕಾರ ಸರ್ವೇಸಾಮಾನ್ಯವಾಗಿ ನೀರಿನ ಸೌಲಭ್ಯ ಸಿಗತಕ್ಕಂಥಾದ್ದು 10 ಲಕ್ಷ ಜನರಿಗೆ ಮಾತ್ರ. ಇನ್ನು 35 ಲಕ್ಷ ಜನರು ಉಳಿದರಲ್ಲ; 10 ಲಕ್ಷ ಜನರಿಗೆ ನೀರಿನ ಸೌಲಭ್ಯ ಒದಗಿಸುತ್ತಿರು ಸ್ಥಳವಾದರೂ ಯಾವುದು ? ಅದು ಸದಾಶಿವನಗರ ಇರಬಹುದು. ಕನ್ನಿಂಗ್‌ಹ್ಯಾಮ್ ರಸ್ತೆ ಇರಬಹುದು. ವಿಧಾನಸೌಧದ ಸುತ್ತಮುತ್ತವಿರುವ ಪ್ರದೇಶಗಳು ಇರಬಹುದು, ಜಯನಗರವಿರಬಹುದು, ವಿ.ವಿ.ಪುರಂ ಇರಬಹುದು. ಈ ವಿಧಾನಸಭಾ ಕ್ಷೇತ್ರಗಳಿಗೆ.....

ಶ್ರೀ ಜೆ.ಹೆಚ್. ಪಟೇಲ್:– ಸದನದ ನಿಯಮಾವಳಿಗಳ ಬಗ್ಗೆ ತಮಗೆ ಹೇಳಿಕೊಡಬೇಕಾಗಿಲ್ಲ. ಈ ವಿಷಯದ ಗಂಭೀರತೆ ಅರಿತು ತಾವು ಹೇಳಬೇಕು. ಇದು ಗಮನ ಸೆಳೆಯುವ ಸೂಚನೆಯಾಗಿದ್ದು, ಚರ್ಚೆ ಮಾಡತಕ್ಕಂಥ ವಿಷಯವಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ:– ನನಗೆ ಗೊತ್ತಿದೆ. ನನಗೆ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಕೆಲಸ ಮಾಡಿದ ಅನುಭವವಿದೆ. ಇಂತಹ ಸೂಚನೆಗಳನ್ನು ಪ್ರಸ್ತಾಪಿಸಿದ್ದೇನೆ. ಆದರೆ, ತಮಗೆ ಅರ್ಥವಾಗಬೇಕಲ್ಲ. ನಾನು ಇದನ್ನು ಪ್ರಾಸಂಗಿಕವಾಗಿ ಏತಕ್ಕೆ ಹೇಳುತ್ತಿದ್ದೇನೆಂದರೆ, ಮೊನ್ನೆ ಯಾರೋ ನನಗೆ ಹೇಳಿದ್ದರು. ಏನೆಂದರೆ, 'ನನಗೆ ಇಬ್ಬರು ಗಂಡು ಮಕ್ಕಳಿದ್ದು, ನಿರುದ್ಯೋಗಿಗಳಾಗಿದ್ದಾರೆ. ಇವರು

ಏನು ಮಾಡುತ್ತಿದ್ದಾರೆಂದಾಗ ಏನೂ ಮಾಡುತ್ತಿಲ್ಲ' ಸರಿ, ಏನು ಮಾಡಬಹುದು ? ಎಂದು ಕೇಳಿದರಂತೆ. ಆಗ ಅವರು 'ಬೆಂಗಳೂರಿನಲ್ಲಿ ಒಳ್ಳೆಯ ಬಿಸಿನೆಸ್ ಇದೆ' ಎಂದರು. ಅದೂವುದು ? ಎಂದರೆ 'ಒಂದೆರಡು ಟ್ಯಾಂಕರ್ ತೆಗೆದುಕೊಂಡಿ. ನೀರಿನ ವ್ಯಾಪಾರ ಮಾಡಬಹುದು' ಎಂದರು. ಇಡೀ ಭಾರತದಲ್ಲಿ ಯಥೇಚ್ಛವಾಗಿ ಭಾರೀ ಚೆನ್ನಾಗಿ ನಡೆಯುತ್ತಿರತಕ್ಕಂಥ ನೀರಿನ ವ್ಯಾಪಾರ ಬೆಂಗಳೂರಿನಲ್ಲಿದೆ. ಇದನ್ನು ನೋಡಿದರೆ ಸಾಕು. ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಅಭಾವ ತೀವ್ರತೆಯಿಂದ ಕೂಡಿದೆ. ಏಕೆ ಹೀಗಾಗಿದೆ ? ಸಮಸ್ಯೆಗಳೇನು ?

ಬೆಂಗಳೂರಿಗೆ ನೀರು ತಲುಪಬೇಕಲ್ಲವೆ ತಿಪ್ಪಗೊಂಡನಹಳ್ಳಿಯಿಂದಾಗಲಿ, ಕಾವೇರಿಯಿಂದಾಗಲಿ ನೀರು ಬರುತ್ತದೆ. ಈ ನೀರು ಸೋರಿ ಹೋಗಬಾರದು. ಅಂದರೆ ಬಂದಂಥ ನೀರು ಸದುಪಯೋಗವಾಗಬೇಕು. ಸದುಪಯೋಗವಾಗಬೇಕಾದರೆ ಇನ್‌ಫ್ರಾಸ್ಟ್ರಕ್ಚರ್ ಬಹಳ ಪ್ರಾಮುಖ್ಯವಾದುದುದಾಗಿದೆ. ಈಗ ಏನಾಗಿದೆ ಎಂದರೆ, ಅಲ್ಲಿ ಸ್ಟೋರೇಜ್ ರಿಜರ್ವಾಯರ್ ಬೇಕು, ಓವರ್ ಹೆಡ್ ಟ್ಯಾಂಕ್‌ಗಳು ಬೇಕು, ಪೈಪ್‌ಲೈನ್ ಹಾಕಬೇಕು. ಈಗ ಏನಾಗಿದೆಯೆಂದರೆ, ಬಂದಂಥ ಸರ್ಕಾರಗಳೆಲ್ಲವೂ ವಿವೇಚನೆಯಿಲ್ಲದೆ ಕೆಲವು ರೆಸಿಡೆನ್ಷಿಯಲ್ ಏರಿಯಾಗಳನ್ನು ಕಮರ್ಶಿಯಲ್ ಎಂದು ಮಾಡಿ ಆ ಪ್ರದೇಶದಲ್ಲಿರುವಂಥ ಜನಸಂಖ್ಯೆಯ ಸಾಮರ್ಥ್ಯಕ್ಕೆ ಈಗ ಒದಗಿಸುತ್ತಿರುವ ನೀರಿನ ಸೌಲಭ್ಯ ಸಾಲುವುದಿಲ್ಲ. 4–5 ಪಟ್ಟು ಹೆಚ್ಚಾಗಿ ಜನಸಂಖ್ಯೆ ಆಯಾ ಪ್ರದೇಶದಲ್ಲಿದ್ದಾರೆ. ಅದು ಲ್ಯಾವೆಲ್ಲಿ ರಸ್ತೆಯಾಗಿರಬಹುದು. ಮತ್ತೊಂದು ರಸ್ತೆಯಾಗಿರಬಹುದು. ಒಳಚರಂಡಿಯ ವ್ಯವಸ್ಥೆಯಲ್ಲಿ ಸಮಸ್ಯೆಯುಂಟಾಗಿರುವುದಲ್ಲದೆ ಕುಡಿಯುವ ನೀರಿನಲ್ಲೂ ಅದೇ ರೀತಿಯ ಸಮಸ್ಯೆಯಾಗಿದೆ. ಈ ಸೌಲಭ್ಯಗಳು ಜನಸಂಖ್ಯೆಗನುಗುಣವಾಗಿ ಇಲ್ಲ. ಇದೊಂದೇ ಅಲ್ಲ. ಜನಸಂಖ್ಯೆ ಆಧಾರಕ್ಕನುಗುಣವಾಗಿ ನೀರಿನ ಸೌಲಭ್ಯ ಒದಗಿಸುವ ವ್ಯವಸ್ಥೆಯಾಗಬೇಕು. ಇದನ್ನು ಈಕ್ವಿಟಬಲ್ ಡಿಸ್ಟ್ರಿಬೂಶನ್ ಎಂದು ಕರೆಯೋಣ. ನೀರು ಬಂದ ನಂತರ ಒಂದೊಂದು ಬಡಾವಣೆಯನ್ನಾಗಿ, ವಿಭಾಗಗಳನ್ನಾಗಿ ಮಾಡಿಕೊಂಡು ಅಲ್ಲಿನ ಜನಸಂಖ್ಯೆಯ ಆಧಾರಕ್ಕನುಗುಣವಾಗಿ ಇನ್ನೂ ಕೂಡ ನೀರಿನ ಸೌಲಭ್ಯ ಒದಗಿಸುವ ವ್ಯವಸ್ಥೆ ಆಗಿಲ್ಲ. ಇವೊತ್ತು ಸದಾಶಿವನಗರಕ್ಕೆ ಅಲ್ಲಿನ ಜನಸಂಖ್ಯೆಗನುಸಾರವಾಗಿ ನೀರಿನ ಸೌಲಭ್ಯ ಕೊಡುತ್ತೇವೆಂದು ಇಟ್ಟಕೊಳ್ಳೋಣ. ಅಲ್ಲದೆ, ನಾವು ಪ್ರೊಪೋಶನೇಟ್ ಆಗಿ ಲೆಕ್ಕ ಹಾಕಿದರೆ ಶ್ರೀನಗರದಲ್ಲಿರುವ ಜನಸಂಖ್ಯೆಗನುಸಾರವಾಗಿ ಎಂಟನೇಯ ಒಂದರಷ್ಟು ಇಲ್ಲವೇ ಹತ್ತನೆಯ ಒಂದರಷ್ಟು ಸಹ ನೀರು ಕೊಡುವುದಿಲ್ಲ. ಸೌಲಭ್ಯವೊದಗಿಸುವಲ್ಲಿ ಭಾರೀ ತಾರತಮ್ಯವಿದೆಯೆಂದು ಹೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ. ಇವೊತ್ತು ಬೆಂಗಳೂರು ನಗರದಲ್ಲಿ ನೀರಿನ ತೀವ್ರ ಅಭಾವವನ್ನು ಹೆಚ್ಚು ಅನುಭವಿಸುತ್ತಿರುವವರು ಯಾರು ?

ಯಾರು ಮಧ್ಯಮವರ್ಗದವರಿದ್ದಾರೆ ಅಥವಾ ಅದಕ್ಕಿಂತ ಕಡಿಮೆ ಇದ್ದಾರೆ, ತೀರಾ ಬಡವರಾಗಿದ್ದಾರೆ, ಯಾರು ನ್ಯಾಯವಾಗಿ ನಲ್ಲಿಯಿಂದ ನೀರನ್ನು ಹಿಡಿದುಕೊಂಡು ತಮ್ಮ ಮನೆಯಲ್ಲಿ ಶೇಖರಿಸಿಟ್ಟುಕೊಳ್ಳಬೇಕು. ಈಗ ನನ್ನ ಮನೆ ಇದೆ. ಅದರಲ್ಲಿ ಸಂಪು ಇದೆ ನೀರು ಸಂಪ್‌ನಲ್ಲಿ ಸ್ಟಾಕ್ ಆಗುತ್ತದೆ. ಬೇಕಾದಾಗ ಪಂಪ್ ಮಾಡಿಕೊಳ್ಳುತ್ತೇವೆ. ಬಡವರ ಮನೆಗಳಿವೆ ಅಲ್ಲಿ ಅವರು ಸಂಪನ್ನು ಇಟ್ಟುಕೊಳ್ಳಲು ಆಗುವುದಿಲ್ಲ. ಚಿಕ್ಕಮನೆಗಳಿರುತ್ತವಲ್ಲ 30" x 40" 30" x 50" – 40" x 60" ಗರಿಷ್ಠ. ಇದರ ಕೆಳಗಿರತಕ್ಕವರೆಲ್ಲ ಸಂಪನ್ನು ಮಾಡಿಕೊಂಡಿರುವುದಿಲ್ಲ. ಈ ರೀತಿ ಪಂಪ್ ಇಲ್ಲದೇ ಇರತಕ್ಕವರ ಪ್ರಜಾಸಂಖ್ಯೆಯೇ ಜಾಸ್ತಿ.

ಶ್ರೀ ಜೆ.ಹೆಚ್. ಪಟೇಲ್:– ನನಗೆ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನನ್ನ ಮತ್ತು ಸರ್ಕಾರದ ಯಾವ ಅಭ್ಯಂತರವೂ ಇಲ್ಲ. ಕಾಲಿಂಗ್ ಅಟೆನ್‌ಷನ್ ನೋಟಿಸ್‌ನಲ್ಲಿ There shall be no debate on such a statement at the time it is made, but each Member in

whose name the itams stands in the List of Business, may with the permission of the Speaker, ask clarification. There shall be no..... ಎಂದು ಇದೆ. ಚರ್ಚೆ ಮಾಡುವುದು ಬೇಡವೆಂದು ನಾನು ಹೇಳುವುದಿಲ್ಲ. ಮಾಡಿ ಬೇರೆ ಯಾವುದಾದರೂ ಪ್ರಾವಿಜನ್‌ನಲ್ಲಿ ಮಾಡಿ ಎಂದು ಹೇಳುತ್ತಿದ್ದೇನೆ.

ಡಾ. ಜೀವರಾಜ ಆಳ್ವ:– ಈಗ ವಿಷಯದ ತೀವ್ರತೆ ಬಹಳ ಜಾಸ್ತಿಯಾಗಿರುವಾಗ ಸಭೆಯ ಕನ್‌ವನ್‌ಷನ್‌ಗಳನ್ನು ಬದಿಗಿಟ್ಟು ಅದರ ಬಗ್ಗೆ ಪೂರ್ಣ ಚರ್ಚೆಯಾಗಬೇಕು. ಮಾನ್ಯ ಪಟೇಲರು ವಿರೋಧ ಪಕ್ಷದಲ್ಲಿ ಕುಳಿತು ಅನುಭವವಿರತಕ್ಕವರು. ಪ್ರತಿಯೊಂದು ವಿಚಾರದಲ್ಲೂ ಸಹ ತೀವ್ರತೆ ಇರುತ್ತದೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಮೂರು ದಿನ ಸದನವಿದೆ, ನಾಡಿದ್ದು ಅಧಿವೇಶನವನ್ನು ಮುಕ್ತಾಯ ಮಾಡಬೇಕು, ಸಪ್ಲಿಮೆಂಟರಿ ಬಜೆಟ್ ಕ್ಲಿಯರ್ ಮಾಡಬೇಕೆಂದು ಹೇಳುತ್ತೀರಿ, ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡಿದರೆ ಆ ವಿಚಾರವನ್ನು ಮುಂದಕ್ಕೆ ತೆಗೆದುಕೊಳ್ಳಿ ಎಂದು ಹೇಳುತ್ತೀರಿ. ಹಾಗಾದರೆ ಯಾವುದನ್ನು ಮಾಡಬೇಕಾಗುತ್ತದೆ ? ಇದು ಬಹಳ ತೀವ್ರತೆ ಇರತಕ್ಕ ವಿಚಾರ, ಬಹಳ ಗಹನವಾಗಿರತಕ್ಕ ವಿಚಾರ. ಬೆಂಗಳೂರು ನಗರಕ್ಕೆ ನೀರಿನ ತೊಂದರೆ ಇದೆ. 15 ದಿನ ನೀರೇ ಇಲ್ಲ. ನಾವೇನು ಮಾತನಾಡುತ್ತಿದ್ದೇವೆಂದರೆ, ಅದು ಬಹಳ ಗಂಭೀರವಾಗಿದೆ. ಮಾನ್ಯ ನಂಜೇಗೌಡರು ಮುಖ್ಯಮಂತ್ರಿಗಳ ಜೊತೆ ಇದರ ಬಗ್ಗೆ ಚರ್ಚೆ ಮಾಡಿದ್ದಾರೆ. I am not flouting, I am not. Conventions and Practics everything is understood. But, under the garb of conventions, do not deny us, do not deprive us.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ನಾವು ನಿಯಮಾವಳಿಗಳ ಪ್ರಕಾರ ಕೆಲಸ ಮಾಡಲು ಸಿದ್ಧರಾಗಿದ್ದೇವೆ. ನೀವೂ ಕಾನೂನು ಪಂಡಿತರು. ನಾವು ನಿಯಮದ ಚೌಕಟ್ಟಿನೊಳಗೆ ಕೆಲಸ ಮಾಡಬೇಕಾಗಿರುವುದನ್ನು ಒಪ್ಪಿಕೊಳ್ಳುತ್ತೇವೆ. ಹಾಗಾದರೆ ತಾವು ಪ್ರತಿನಿತ್ಯ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿ ಏಕೆಂದರೆ, ಬೆಂಗಳೂರಿನಲ್ಲಿ ಲಕ್ಷಾಂತರ ಜನಸಾಮಾನ್ಯ ಜನರಿಗೆ ನೀವೇ ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ಅರ್ಧಭಾಗ ನೀರನ್ನು ಕೊಡಲು ನಿಮ್ಮಿಂದ ಆಗುತ್ತಿಲ್ಲ. ಈ ರೀತಿ ಇರಬೇಕಾದರೆ ಇವತ್ತು ಲಕ್ಷಾಂತರ ಜನಸಾಮಾನ್ಯರನ್ನು ಕರೆದುಕೊಂಡು ಬಂದು ವಿಧಾನ ಸೌಧದ ಮುಂದೆ ಕೂರಿಸಿ ನೀರನ್ನು ಕೊಡಿ ಎಂದು ಕೇಳಬೇಕು ? ನೀರನ್ನು ಒದಗಿಸುವುದು ನಿಮ್ಮ ಕರ್ತವ್ಯ. ನೀವು ಅಧಿಕಾರಕ್ಕೆ ಬಂದ 24 ಗಂಟೆಯೊಳಗಾಗಿ ಬೆಂಗಳೂರು ಮಹಾ ನಗರದಲ್ಲಿ ಬೇರೆ ಬೇರೆ ನಗರಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ನೀವು ಆದ್ಯತೆಯನ್ನು ಕೊಡಲಿಲ್ಲ, ನಿಮ್ಮದೇ ಆದಂಥ ಗೊಂದಲದಲ್ಲಿ ನೀವು ಕೈಕಟ್ಟಿಕೊಂಡು ಕುಳಿತಿರತಕ್ಕ ಸಮಯದಲ್ಲಿ ನಿಯಮವನ್ನು ಬದಿಗಿಟ್ಟು ಬೆಂಗಳೂರು ಮಹಾ ನಗರದ ಜನತೆಗೆ ನೀರನ್ನು ಕೊಡಲು ಪ್ರಯತ್ನಿಸಬೇಕು. ನಿಮ್ಮ ಉತ್ತರವನ್ನು ನೋಡಿದರೆ ನಾವು ಮಾತನಾಡತಕ್ಕಂಥ ಅಗತ್ಯವೇ ಇಲ್ಲ. ಅಲ್ಲಿ ಪರಿಹಾರವೇ ಇಲ್ಲ. ತಮ್ಮ ಉತ್ತರದಲ್ಲಿ ಏನು ಹೇಳಿದ್ದೀರಿ ಎಂಬುದನ್ನು ದಯಮಾಡಿ ನೋಡಿ. ಹಾಲಿ ಮುಂಬರುವ ಒಂದು ವರ್ಷದ ಅವಧಿಯಲ್ಲಿ ಕಾವೇರಿ ಮೂರನೆ ಘಟ್ಟವನ್ನು ಹಂತ ಹಂತವಾಗಿ ಮುಗಿಸಿ ಪೂರ್ಣವಾಗಿ ಜಾರಿ ಮಾಡಿದಲ್ಲಿ ನೀರಿನ ಸರಬರಾಜಿನಲ್ಲಿ 22 ಎಂಜಿಟಿಡಿ ಹೆಚ್ಚುವರಿಯಾಗುತ್ತದೆ. ಇದನ್ನು ಯಾವಾಗ ಮುಗಿಸಬೇಕು ? ಯಾವಾಗ ಮಾಡುತ್ತೀರಿ ? ಇರುವಂಥವರಿಗೆ ಒಂದೆರಡು ಕೊಡ ನೀರು ಸಿಗದಿರತಕ್ಕ ಸಮಯದಲ್ಲಿ ಜನರು ಬೀದಿ ಪಾಲಾಗಿರುವ ಬಗ್ಗೆ ಮಹತ್ವವಾದ ವಿಷಯವನ್ನು ಚರ್ಚೆ ಮಾಡತಕ್ಕ ಸಮಯದಲ್ಲಿ ನೀವು ಒಂದೇ ಸಾಲಿನ ಉತ್ತರ ಹೇಳಿ. ಈ ಸಮಸ್ಯೆಯನ್ನು ಬಗೆಹರಿಸುತ್ತೇವೆ. 24 ಗಂಟೆಯೊಳಗೆ ಅಗತ್ಯವಿರತಕ್ಕ ಕುಡಿಯುವ ನೀರನ್ನು ಬೆಂಗಳೂರು ನಗರಕ್ಕೆ ಕೊಡುತ್ತೇವೆ. ಅದಕ್ಕೆ ಸಿದ್ಧರಿದ್ದೇವೆನ್ನತಕ್ಕ ಮಾತನ್ನು ಹೇಳಿ ಆಗ ನಾವು ಚರ್ಚೆ ಮಾಡತಕ್ಕ ಅಗತ್ಯವಿಲ್ಲ. ಇಲ್ಲದಿದ್ದರೆ ನಾವು ಚರ್ಚೆ ಮಾಡಬೇಕಾಗುತ್ತದೆ, ಪ್ರಸ್ತಾಪ ಮಾಡಬೇಕಾಗುತ್ತದೆ. ನಾವು ಈ ಪ್ರಶ್ನೆಯನ್ನು ಕೇಳುತ್ತಿರತಕ್ಕದ್ದು

ಇದಕ್ಕೆ ಪರಿಹಾರವನ್ನು ಹುಡುಕುವುದಕ್ಕೋಸ್ಕರ. ಪರಿಹಾರವನ್ನು ಹುಡುಕುವ ರೀತಿಯಲ್ಲಿ ನಿಮ್ಮ ಉತ್ತರವಿಲ್ಲ. ಹೀಗಾಗಿ ನಾವು ಅನಿವಾರ್ಯವಾಗಿ ವಿವರವಾದ ಚರ್ಚೆ ಮಾಡಬೇಕಾಗುತ್ತದೆ.

ಶ್ರೀ ಹೆಚ್.ಡಿ. ದೇವೆಗೌಡ (ಮುಖ್ಯ ಮಂತ್ರಿಯವರು):– ನೀವು ಚರ್ಚೆಮಾಡುವುದರ ಬಗ್ಗೆ ನಮ್ಮದೇನೂ ತಕರಾರಿಲ್ಲ. ಅಧ್ಯಕ್ಷರು ಯಾವ ರೀತಿ ನಡೆದುಕೊಳ್ಳಬೇಕೆಂದು ಹೇಳುತ್ತಾರೋ ಆ ರೀತಿ ನಡೆದುಕೊಳ್ಳುತ್ತೇವೆ. ಆದರೆ ಯಡಿಯೂರಪ್ಪನವರ ವೇಗದಲ್ಲಿ ನಾನು ಹೋಗಲು ನನ್ನ ಹತ್ತಿರ ಮಂತ್ರದಂಡವಿಲ್ಲ. ಆ ರೀತಿಯಲ್ಲಿ ನಾನು ಕೆಲಸ ಮಾಡುವುದು ಕಷ್ಟವಿದೆ. ನಮಗೂ ಸಹ ಆ ಸಮಸ್ಯೆಗಳ ಅರಿವಿದೆ. ಗೌರವಾನ್ವಿತ ಸದಸ್ಯರಾದ ನಂಜೇಗೌಡರು ಸರ್ಕಾರದಲ್ಲಿ, ಅಧಿಕಾರದಲ್ಲಿದ್ದು ಕೆಲಸ ಮಾಡಿದ್ದಾರೆ. ಶ್ರೀಮಾನ್ ಜೀವರಾಜ್ ಆಳ್ವರವರು ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. 24 ಗಂಟೆಯೊಳಗೆ ಇದನ್ನು ಬಗೆಹರಿಸಲು ನನ್ನ ಹತ್ತಿರ ಮಂತ್ರದಂಡವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಹಾಗಾದರೆ ಎಷ್ಟು ದಿನದಲ್ಲಿ ಕೊಡುತ್ತೀರಿ ? ಅದನ್ನು ಹೇಳಿ ? ಎಷ್ಟು ದಿನ ಬೇಕು ?

ಶ್ರೀ ಹೆಚ್. ಡಿ. ದೇವೇಗೌಡ:– ನಾನು ಉತ್ತರವನ್ನು ಕೊಡುವಾಗ ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಹಾಗಾದರೆ ಇವರಿಗೆ ಇದರ ಬಗ್ಗೆ ಕಳಕಳಿ ಇಲ್ಲ.

ಶ್ರೀ ಹೆಚ್. ಡಿ. ದೇವೇಗೌಡ:– 24ಗಂಟೆಯಲ್ಲಿ ಕೊಡಲು ಸಾಧ್ಯವೆ, ನೀವು ಅಧಿಕಾರಕ್ಕೆ ಬಂದಾಗ ಬೇಕಾದರೆ ಆ ರೀತಿ ಕೊಡಿ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಸಭಾಧ್ಯಕ್ಷರೇ, ಈ ನಿಯಮಗಳನ್ನು ಬದಿಗೊತ್ತಿ ಇದನ್ನು ಸಮಗ್ರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಒಂದು ಹೇಳುತ್ತಿದ್ದೇನೆ. ದಯಮಾಡಿ ಈ ಒಂದು ಗಮನ ಸೆಳೆಯುವ ಸೂಚನೆಯನ್ನು ಚರ್ಚೆಯಾಗಿ ಮಾಡಿ ಎಲ್ಲರೂ ಭಾಗವಹಿಸತಕ್ಕಂತಹ ಅವಕಾಶ ಕೊಡಿ ಇದು ಬಹಳ ಪ್ರಾಮುಖ್ಯವಾದ ವಿಚಾರ. ಇದು ಬೆಂಗಳೂರು ನಗರದ ನೀರಿನ ಸಮಸ್ಯೆ. ನಾನು 24 ಗಂಟೆಯೊಳಗೆ ನೀರು ಕೊಡಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಯಾವತ್ತು ಕೊಡುತ್ತೀರಿ, ಅದನ್ನು ಯಾವಾಗ ಸರಿಪಡಿಸುತ್ತೀರಿ ಅಂತ ಕೇಳತಕ್ಕಂಥಾದ್ದು ನನ್ನ ಕರ್ತವ್ಯ. ಇದರ ಬಗ್ಗೆ ನೀವು ಹೇಳಿದ್ದುದು ತಾವು ಮಾಯಾ ಮಂತ್ರ ಮಾಡುವುದಕ್ಕೆ ಹೋಗುವುದಿಲ್ಲ ಎನ್ನುವ ಪ್ರಶ್ನೆ ಬೇರೆ. ಆದರೆ ಇದರಲ್ಲಿ ಸತ್ಯಾಂಶ ಏನು ಇದೆ ಎಂಬುದನ್ನು ಅರಿತುಕೊಂಡು ಬೆಂಗಳೂರಿನ ಜನರಿಗೆ ಪ್ರತಿನಿತ್ಯ ನೀರಿನ ಬಗ್ಗೆ ಆಗತಕ್ಕಂತಹ ಅನ್ಯಾಯವನ್ನು ತಾವು ಗಮನದಲ್ಲಿಟ್ಟುಕೊಂಡು ಅದರ ಸಮಗ್ರವಾದ ಚರ್ಚೆಗೆ ಅವಕಾಶ ಕೊಡಬೇಕು ಎಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

ಅಧ್ಯಕ್ಷರು:– ಗಮನಸೆಳೆಯುವ ಸೂಚನೆಯನ್ನು ತಾವು ಕೊಟ್ಟಿದ್ದೀರಿ. ಅವರು ಸ್ಟೇಟ್‌ಮೆಂಟ್ ಮಾಡಿದ್ದಾರೆ. ನಿಯಮಾವಳಿಗಳ ಪ್ರಕಾರ ತಾವು ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಇರುತ್ತದೆ. ಡಾ. ಜೀವರಾಜ ಆಳ್ವರವರು ಹೇಳಿದಂತೆ ಪ್ರಾಮುಖ್ಯತೆ ದೃಷ್ಟಿಯಿಂದ ಸ್ವಲ್ಪ ನಿಯಮಾವಳಿಗಳನ್ನು ಸಡಿಲಗೊಳಿಸಿ ಸ್ವಲ್ಪ ಆಚೆ ಈಚೆ ಹೋಗಬಹುದು. ಸಹಿ ಹಾಕಿದವರು ಹಾಕದೆ ಇರುವವರು ಎಲ್ಲರೂ ಮಾತನಾಡಬೇಕಾದರೆ ನಾವು ವಾಟಾಳ್ ಅವರು ಹೇಳಿದಂತಹ ಒಂದು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಈಗ ಸದ್ಯ ನಮ್ಮ ಮುಂದೆ ಇದೇ ಇರುವುದರಿಂದ ತಾವು ಕ್ಲಾರಿಫಿಕೇಷನ್ ಕೇಳತಕ್ಕಂಥದ್ದನ್ನು ಮಾಡಿದರೆ ಅಲ್ಲಿಗೂ ತಮಗೆ ತೃಪ್ತಿ ಆಗದೆ ಹೋದರೆ ಸಮಯದ ಅಭಾವ ಹೇಗೆ ಇರುತ್ತದೆ ಎಂಬುದನ್ನು ನೋಡಿಕೊಂಡು ಮತ್ತೆ ಇದನ್ನು ವಿಸ್ತಾರವಾಗಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನಪಡೋಣ.

ಶ್ರೀ ಎಂ. ಶ್ರೀನಿವಾಸ್:– ಮಾನ್ಯ ಅಧ್ಯಕ್ಷರೆ, ಮೊನ್ನೆ ನಡೆದಂತಹ ಮೀಟಿಂಗ್‌ನಲ್ಲಿ ಭಾರತದೇಶದಲ್ಲಿಯೇ ಉತ್ತರ ಹಳ್ಳಿ ಕ್ಷೇತ್ರದಲ್ಲಿ ಸುಮಾರು 10 ಲಕ್ಷ ಜನಸಂಖ್ಯೆ ಇದೆ. ಮತದಾರರು ಸುಮಾರು ಆರುಲಕ್ಷ ಮೂವತ್ತಾರು ಜನ ಇದ್ದಾರೆ. ಉತ್ತರ ಹಳ್ಳಿ ಕ್ಷೇತ್ರ ಅಂದರೆ ಬೆಂಗಳೂರು ಸುತ್ತ ಜಯನಗರ ಬಸವೇಶ್ವರನಗರ ಎಲ್ಲಾ ಸೇರಿದೆ. ನಮ್ಮ ನೀರಿನ ವ್ಯವಸ್ಥೆ ಸಭೆಗೆ ನಮ್ಮನ್ನು ಕರೆಯಲಿಲ್ಲ. ಈ ಒಂದು ತಾರತಮ್ಯ ಏಕೆ ? ಮತ್ತು ನಮ್ಮ ಕ್ಷೇತ್ರದ ಬಗ್ಗೆ ಮಾತನಾಡುವುದಕ್ಕೆ ತಾವು ನನಗೂ ಅವಕಾಶ ಮಾಡಿಕೊಡಬೇಕು.

ಶ್ರೀ ಹೆಚ್.ಎನ್. ನಂಜೇಗೌಡ:– ಮಾನ್ಯ ಅಧ್ಯಕ್ಷರು ನಿಯಮದ ಪ್ರಕಾರ ಈ ವಿಷಯವನ್ನು ಚರ್ಚೆಗೆ ಇಟ್ಟುಕೊಳ್ಳುತ್ತೇವೆ ಎಂದರೆ ನಮ್ಮದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು:– ವಿಷಯದ ಪ್ರಾಮುಖ್ಯತೆಯನ್ನು ಗಮನದಲ್ಲಿಟ್ಟುಕೊಂಡು ಇನ್ನೂ ಹಲವಾರು ಜನ ಸದಸ್ಯರು ಬೆಂಗಳೂರು ನಗರದಿಂದ ಬಂದಿರತಕ್ಕವರು ಈ ಚರ್ಚೆಯಲ್ಲಿ ಪಾಲ್ಗೊಳ್ಳಬೇಕು ಎನ್ನತಕ್ಕ ಅವಶ್ಯಕತೆ ಇರುವುದರಿಂದ ಈ ವಿಷಯನ್ನು ನಾಳೆ 69ನೇ ನಿಯಮದಡಿಯಲ್ಲಿ ತೆಗೆದುಕೊಳ್ಳೋಣ. ಎಲ್ಲಾ ಸದಸ್ಯರು ಭಾಗವಹಿಸಲಿಕ್ಕೆ ಅವಕಾಶವಾಗುತ್ತದೆ.

ಶ್ರೀ ಹೆಚ್.ಎನ್. ನಂಜೇಗೌಡ:– ಹಾಗಾದರೆ ಈ ಚರ್ಚೆಯನ್ನು ನಾಳೆ ಪ್ರಾರಂಭ ಮಾಡುತ್ತೇನೆ.

ಅಧ್ಯಕ್ಷರು:– ಶ್ರೀಯುತರುಗಳಾದ ಮಾಲಿಕಯ್ಯ ಗುತ್ತೇದಾರ್, ರಾಜ ವೆಂಕಟಪ್ಪ ನಾಯಕ್ ಹಾಗೂ ಸುಭಾಷ್ ಆರ್. ಗುತ್ತೇದಾರ್‌ರವರು ಗಮನ ಸೆಳೆಯುವ ಸೂಚನೆಯನ್ನು ಮಂಡಿಸತಕ್ಕದ್ದು.

2. 1994–95ನೇ ಹಿಂಗಾರು ಹಂಗಾಮಿಯಾಗಿ ಸಂಗ್ರಹಿಸಲ್ಪಟ್ಟ ಬಸವ ಸಾಗರ ಜಲಾಶಯದ ನೀರನ್ನು ಕೃಷ್ಣನದಿಗೆ ಬಿಟ್ಟಿರುವುದು.

ಶ್ರೀ ಮಾಲೀಕಯ್ಯ ಏ. ಗುತ್ತೇದಾರ್ (ಅಫ್ಜಲ್‌ಪುರ):– ಮಾನ್ಯ ಅಧ್ಯಕ್ಷರೆ, 1994–95ನೇ ಹಿಂಗಾರು ಹಂಗಾಮಿಯಾಗಿ ಸಂಗ್ರಹಿಸಲ್ಪಟ್ಟ ಬಸವ ಸಾಗರ ಜಲಾಶಯದ ನೀರನ್ನು ಕೃಷ್ಣನದಿಗೆ ಬಿಟ್ಟು ಜಲಾಶಯ ಖಾಲಿ ಮಾಡಿರುವುದರ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯ ಮಂತ್ರಿಯವರು):– ಮಾನ್ಯ ಅಧ್ಯಕ್ಷರೆ, ನೀರಾವರಿ ಸಲಹಾ ಸಮಿತಿಯ ನಿರ್ಧಾರದಂತೆ ಬಸವ ಸಾಗರ ಜಲಾಶಯದಿಂದ ಹಿಂಗಾರು ಹಂಗಾಮಿನಲ್ಲಿ ಅರೆ ನೀರಾವರಿ ಬೆಳೆಯನ್ನು ಬೆಳೆಯಲು (ಶೇಂಗಾ ಬೆಳೆಯನ್ನು ನಿಷೇಧಿಸಿ) ಸೂಚನೆ ನೀಡಲಾಗಿತ್ತು. ಈ ಸೂಚನೆಗೆ ವ್ಯಾಪಕ ಪ್ರಚಾರವನ್ನೂ ಸಹ ನೀಡಲಾಯಿತು. ಸಲಹಾ ಸಮಿತಿಯ ನಿರ್ಣಯವನ್ನೂ ಯೋಜನಾ ಪ್ರವೇಶದ ಎಲ್ಲಾ ಮಾನ್ಯ ಸಚಿವರುಗಳಿಗೂ, ಲೋಕಸಭಾ ಸದಸ್ಯರುಗಳಿಗೂ ಮತ್ತು ಶಾಸನ ಸಭಾ ಸದಸ್ಯರುಗಳಿಗೂ, ವಿಭಾಗಾಧಿಕಾರಿಗಳಿಗೂ, ಜಿಲ್ಲಾಧಿಕಾರಿಗಳಿಗೂ ಹಾಗೂ ಕಾಡಾ ಆಡಳಿತಾಧಿಕಾರಿಗಳಿಗೂ ಕಳುಹಿಸಲಾಗಿದೆ. ಅಲ್ಲದೆ, ಈ ಬಗ್ಗೆ ಭಿತ್ತಿಪತ್ರಗಳನ್ನೂ ಸಹ ಎಲ್ಲಾ ಹಳ್ಳಿಗಳಿಗೆ ಹಾಗೂ ರೈತರಿಗೆ ಹಂಚಲಾಗಿದೆ. ಆದಾಗ್ಯೂ ರೈತರು ಡಿಸೆಂಬರ್ ಕೊನೆಯ ವಾರದಲ್ಲೂ ಸಹ ಶೇಂಗಾ ಬೆಳೆಯನ್ನು ಬಿತ್ತುತ್ತಿರುವುದು ಕಂಡುಬಂದಿದೆ.

ಅಧಿಸೂಚಿತ ಪ್ರದೇಶಗಳಿಗೆ 28–2–1995ರವರೆಗೆ ನೀರು ಬಿಡುವ ಕಾರ್ಯಕ್ರಮವಿದ್ದು ಇದರ ಅನುಸಾರ ಜಲಾಶಯದಲ್ಲಿ ನೀರಿನ ಲಭ್ಯತೆಯಿದೆ.

ಮುಂಗಾರು ಹಂಗಾಮಿನಲ್ಲಿ ರೈತರಿಗೆ ಸಮರ್ಪಕವಾಗಿ ನೀರನ್ನು ಪೂರೈಸಲಾಗಿದೆ.

ಅನಾವಶ್ಯಕವಾಗಿ ಗೇಟುಗಳನ್ನು ಎತ್ತಿ ನೀರು ಬಿಡಲಾಗಿದೆ ಎಂಬುದು ಸತ್ಯಕ್ಕೆ ದೂರವಾದುದು. ಅಣೆಕಟ್ಟಿನ ನಾಲ್ಕು ತೂಬುಗಳಿಂದ ನೀರು ಸೋರುತ್ತಿರುವುದು ವಾಸ್ತವಾಂಶ.